ಲಲಿತಮಂಟಪ

# ಹೋಳಿಕೆಯ ಅತಿರೇಕದಲ್ಲಿ ಭಾರತದ ನಿಜವಾದ ಸತ್ವಕ್ಕೆ ಕುಂದು

## ಇಟಲಿಯ ಭರತನಾಟ್ಯ ಕಲಾವಿದೆ ಲ್ಯುಕ್ರೇಸಿಯಾ ಮಾನಿಸ್ಕೋಟಿ ಸಂದರ್ಶನ

**ಕೋಡಿಬೆಟ್ಟು ರಾಜಲಕ್ಷ್ಮಿ**

ಇಟಲಿಯ ಲ್ಯುಕ್ರೇಸಿಯಾ ಮಾನಿಸ್ಕೋಟಿ, ಚೆನ್ನೈ ಕಲಾಕ್ಷೇತ್ರದಲ್ಲಿ ಭರತನಾಟ್ಯ ಗುರು ಪದ್ಮಶ್ರೀ ಅಡೆಯಾರ್ ಲಕ್ಷ್ಮಣ ರಾವ್ ಅವರಿಂದ ಭರತನಾಟ್ಯ ಕಲಿತವರು. ಪ್ರಸ್ತುತ ನೃತ್ಯ ಗುರುವಾಗಿ, ಕಲಾವಿದೆ ಮತ್ತು ಕೊರಿಯೊಗ್ರಾಫರ್ ಆಗಿ ಗುರುತಿಸಿಕೊಂಡಿದ್ದಾರೆ. ಚೆನ್ನೈ ಮತ್ತು ಇಟಲಿಯ ನೃತ್ಯಕ್ಷೇತ್ರದಲ್ಲಿ ಸಕ್ರಿಯರಾಗಿ ಹೊಸ ನೃತ್ಯಪ್ರಸ್ತುತಿಗಳನ್ನು ನೀಡುತ್ತಿದ್ದಾರೆ. ಅವರು ಭಾಗವತುಳ ಸೀತಾರಾಮ ಶರ್ಮ ಅವರಿಂದ ನಟ್ಟುವಾಂಗಮ್ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಕಲಿತವರು. ಅಭಿನಯ ಕಲೆಯನ್ನು ಗುರು ಇಂದಿರಾ ಕಾದಂಬಿ ಅವರಿಂದ ಕಲಿತವರು. ಇಟಲಿಯ ಮಿಲಾನ್ ನಗರದಲ್ಲಿ ಹುಟ್ಟಿ ಬೆಳೆದು, ಅಲ್ಲಿಯೇ ಭರತನಾಟ್ಯದ ಪ್ರಾಥಮಿಕ ಶಿಕ್ಷಣ ಪಡೆದು, ಭರತನಾಟ್ಯ ಕಲಾಪ್ರಕಾರದ ಬಗ್ಗೆ ಆಕರ್ಷಿತರಾಗಿ, ಭಾರತೀಯ ಇತಿಹಾಸ, ಕಲೆ ಹಾಗೂ ಸಂಸ್ಕೃತ ಮತ್ತು ಪುರಾಣ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಜೊತೆಗೆ ನೃತ್ಯಕಲಿಕೆಯನ್ನು ಮುಂದುವರೆಸಲು 2004ರಲ್ಲಿ ಚೆನ್ನೈಗೆ ಬಂದು, ಪ್ರಸ್ತುತ ಚೆನ್ನೈಯಲ್ಲಿಯೇ ನೆಲೆಸಿದ್ದಾರೆ. ಜೊತೆಗೆ ಇಟಲಿಯಲ್ಲಿಯೂ 'ಸಂಗಮ್ ಅಕಾಡೆಮಿ' ಎಂಬ ನೃತ್ಯ ತರಗತಿಯನ್ನು ತೆರೆದು ಅಪಾರ ಸಂಖ್ಯೆಯ ಶಿಷ್ಯಂದಿರಿಗೆ ನೃತ್ಯಶಿಕ್ಷಣ ನೀಡುತ್ತಿದ್ದಾರೆ. ಅವರೊಡನೆ 'ಮಯೂರ' ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ.

